4) ಶಿಕಾರಿಪುರದ ಪ್ರಥಮ ದರ್ಜೆಯ ಕಾಲೇಜು ಕಟ್ಟಡ ವಿಳಂಬವಾಗಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ನಗರದಲ್ಲಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕೆಲಸಕ್ಕಾಗಿ ಸಾರ್ವಜನಿಕರಿಂದ ೧ ಲಕ್ಷ ರೂಪಾಯಿ ಸಂಗ್ರಹಿಸಿ ಸಾರ್ವಜನಿಕರಿಂದ ಸ್ಥಳ ಖರೀದಿ ಮಾಡಿ ಹಣ ಮತ್ತು ಜವಿೂನನ್ನು ಕೊಟ್ಟು ೩ ವರ್ಷವಾದರೂ ಈವರೆಗೆ ತಳಪಾಯದ ಕೆಲಸ ಸಹಾ ಪೂರ್ಣವಾಗಿಲ್ಲ. ಆದರೆ ಇದರ ಜೊತೆ ಮಂಜೂರಾದ ಕೊಡಗಿನ ಕಾಲೇಜಿನ ಕಟ್ಟಡದ ಕೆಲಸ ಪೂರ್ಣ ಆಗಿದೆ. ಉದ್ದೇಶಪೂರಕವಾಗಿ ಈ ಕಟ್ಟಡದ ಕೆಲಸವನ್ನು ಸಂಬಂಧಪಟ್ಟ ಕಂಟ್ರಾಕ್ಟದಾರ ನಿಲ್ಲಿಸಿದ್ದಾ ಇದಕ್ಕೆ ಅಧಿಕಾರಿಗಳು ಸಹಾ ಶಾಮೀಲಾಗಿದ್ದು ೧೯೯೬-೯೭ನೇ ಸಾಲಿನಲ್ಲಿ ಮಂಜೂರಾಗಿದ್ದು ಹಣ ಸಹ ಪೂರ್ಣ ಉಪಯೋಗಿಸಿಕೊಂಡಿಲ್ಲ. ಸಂಬಂಧಪಟ್ಟ ಕಂಟ್ರಾಕ್ಟದಾರನ ಮೇಲೆ ಸೂಕ್ತ ಕ್ರಮ ಕೈಗೊಂಡು ತಕ್ಷಣ ಈ ಕೆಲಸ ಪ್ರಾರಂಭಿಸುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ತರಿಸಿ ಕೊಡುತ್ತೇನೆ.

5) ರಾಜ್ಯದಲ್ಲಿ ಸರ್ಕಾರೀ ಭೂಮಿಯನ್ನು ಆಕ್ರಮಣ ಮಾಡಿಕೊಂಡಿರುವ ಬಡವರಿಗೆ ಸಕ್ರಮ ಮಾಡಿಕೊಡುವುದು.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಸಾವಿರಾರು ಬಡಕುಟುಂಬಗಳು ಹಲವಾರು ವರ್ಷಗಳಿಂದ ಸರಕಾರಿ ಭೂಮಿಯನ್ನು ಆಕ್ರಮಣ ಮಾಡಿ ಹೇರಳ ಕೃಷಿ ಮಾಡಿ ಮನೆ, ಹಟ್ಟಿ ಕೊಟ್ಟಿಗೆಗಳನ್ನು ಕಟ್ಟಿಕೊಂಡು ಜೀವನ ನಡೆಸುತ್ತಿರುವ ವಿಚಾರ ಸರಕಾರದ ಗಮನಕ್ಕೆ ತಂದಿದ್ದೇವೆ. ಅವರು ಆಕ್ರಮಣ ಮಾಡಿ ಕೃಷಿ ಮಾಡಿದ ಸ್ಥಳವನ್ನು ಅವರವರಿಗೇ ಕೊಡಿಸಬೇಕೆಂದು ಇಲ್ಲಿಯವರೆಗೂ ಸದನದ ಎಲ್ಲಾ ಸದಸ್ಯರು ಸರಕಾರದ ಮೇಲೆ ಒತ್ತಡವನ್ನು ಹಾಕಿದ್ದಾರೆ. ಸರಕಾರ ಕೂಡಾ ಕೊಡಬಹುದೆಂದು ಒಪ್ಪಿಕೊಂಡಿದೆ. ಆದರೆ ಇಂದಿನ ತನಕ ಕೊಟ್ಟಿಲ್ಲ ಏಕೆ ? ಆ ರೀತಿ ಕೃಷಿ ಮಾಡಿದ ಕುಟುಂಬದವರಿಗೆ ಆ ಭೂಮಿಯನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಬೇಕಾದ ಆರ್ಥಿಕ ಸಹಾಯವನ್ನು ಬ್ಯಾಂಕಿನಿಂದ ಅಥವಾ ಸಹಕಾರಿ ಸಂಘಗಳಿಂದ ಪಡೆಯಲು ಸಾಧ್ಯವಿಲ್ಲ ಅಥವಾ ಸರಕಾರದಿಂದ ಕೊಡಲ್ಪಡುವ ಯಾವುದೇ ರೀತಿಯ ಸವಲತ್ತನ್ನು ಪಡೆಯಲು ಅವರು ಅನರ್ಹರಾಗಿರುತ್ತಾರೆ. ಈ ದೃಷ್ಟಿಯಿಂದ ಆಕ್ರಮಣದಾರರಿಗೆ ತಕ್ಷಣ ಅವರು ಮಾಡಿದ ಆಕ್ರಮಣ ಭೂಮಿಯ ಒಡೆತನವನ್ನು ತಕ್ಷಣ ಕೊಡಬೇಕಾಗಿದೆ. ಇದಕ್ಕಾಗಿ ಸರಕಾರ ಏನು ಮಾಡಿದೆ ? ಅವರಿಗೆ ಎಷ್ಟು ಸಮಯದೊಳಗೆ ಅವರು ಆಕ್ರಮಣ ಮಾಡಿ ಸ್ವಾಧೀನ ಪೊಂದಿದ ಭೂಮಿಯ ಹಕ್ಕು ಪತ್ರವನ್ನು ಕೊಡುತ್ತೀರಿ, ವಿಳಂಬವಾಗಲು ಕಾರಣವೇನು ಎಂಬುದಕ್ಕೆ ವಿವರಣೆ ನೀಡಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎಂ. ರಘುಪತಿ (ಕಂದಾಯ ಸಚಿವರ ಪರವಾಗಿ).— ಮಾನ್ಯ ಅಧ್ಯಕ್ಷರೇ, ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ.—ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉತ್ತರ ತರಿಸಿಕೊಡುತ್ತೇನೆ, ಉತ್ತರ ತರಿಸಿ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಗೋಪಾಲ ವಂಕುಂದ ಕಾನಡೆ.—ಉತ್ತರ ಸ್ಪಷ್ಟವಾಗಿ ಹೇಳಲಿ.....

ಶ್ರೀ ಆರ್. ಎನ್. ನಾಯಕ್.— ಇದರಿಂದ ಸರ್ಕಾರದ ಇಮೇಜ್ ಎಫಿಷಿಯನ್ಸಿ ಅನ್ನು ತೋರಿಸುತ್ತದೆ.....

ಶ್ರೀ ಎ. ಲಕ್ಷ್ಮೀಸಾಗರ್.—ಏನು ಮಾಡಬೇಕು ಹೇಳಿ, ನಿಯಮದ ಪ್ರಕಾರ ನಡೆಯುತ್ತಿದ್ದೇವೆ.

ಶ್ರೀ ಆರ್. ಆರ್. ನಾಯಕ್. .. ಉತ್ತರ ತರಿಸಿಕೊಡುತ್ತೇನೆ ಎಂದು ಬೋರ್ಡ್ ಹಾಕಿಕೊಳ್ಳಲಿ...

ಅಧ್ಯಕ್ಷರು.— ಬ್ಲೇಸಿಯಸ್ ಎಂ. ಡಿಸೌಜರವರು ಮಂಗಳೂರಿನ ಬಸ್ ನಿಲ್ದಾಣಕ್ಕೆ ಕಾಂಕ್ರೀಟ್ ಹಾಕಿಸುವ ಬಗ್ಗೆ ಕೇಳಿ.